ದಿಃ **19-11-2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ ಎದುರುದಾರರ ಪರ ಶ್ರೀ.**MBK** ವಕೀಲರವರಿಂದಃ</u>

**01.** ನಿ.ಪಿ.**11** ಮತ್ತು **12** ರ ಮೇಲೆ ತಂದೆ ಹಾಗೂ ತಾಯಿಯ ಹೆಸರು ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಶಾಲೆ ಫೀಜನ್ನು ನಾವು ಕಟ್ಟಿರುತ್ತೇವೆ. ನಿ.ಪಿ.**11** ಮತ್ತು **12** ರಲ್ಲಿ ಒಟ್ಟು ಹಣ ಸಂಪೂರ್ಣವಾಗಿ ತಪ್ಪಿನಿಂದ ಕೂಡಿರುತ್ತದೆ ಎಂದರೆ ನಾನು ಶುಲ್ಕವನ್ನು ಭರಿಸಿ ಬಂದಿರುತ್ತೇನೆ ಅವುಗಳನ್ನು ಈಗ ನೋಡುತ್ತಿದ್ದೇನೆ, ಮನೆಯಲ್ಲಿ ಸರಿಯಾಗಿ ನೋಡಿರುವುದಿಲ್ಲ. ನಿ.ಪಿ.**11** ಮತ್ತು **12** ನ್ನು ನಾನೇ ಬರೆದುಕೊಂಡು ಬಂದು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.**11** ಮತ್ತು **12** ರ ಮೇಲೆ ಶಾಲೆಯ ಸೀಲು ಇರುವುದಿಲ್ಲ ಎಂದರೆ ಸರಿ.

**02.** ನಿ.ಪಿ.**13** ಮತ್ತು **14** ರ ಮೇಲೆ ನನ್ನ ಹೆಸರಾಗಲಿ ಅಥವಾ ಎದುರುದಾರರ ಹೆಸರಾಗಲಿ ಇರುವುದಿಲ್ಲ ಎಂದರೆ ಸರಿ. ನಿ.ಪಿ.**14** ರಲ್ಲಿ ಒಟ್ಟು ಹಣ ತಪ್ಪಾಗಿ ನಮೂದು ಆಗಿದ್ದು ಅದನ್ನು ನಾನೇ ಬರೆದುಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.**14** ರಲ್ಲಿ ಶಾಲೆಯ ಸೀಲು ಇರುವುದಿಲ್ಲ ಎಂದರೆ ಸರಿ. ನಿ.ಪಿ.**13** ರಲ್ಲಿಯೂ ಸಹ ಸೀಲು ಇರುವುದಿಲ್ಲ ಎಂದರೆ ಅವರು ಅದರಲ್ಲಿಯೇ ಬರೆದುಕೊಟ್ಟಿರುತ್ತಾರೆ. ನಿ.ಪಿ.**15** ರಲ್ಲಿ ಒಟ್ಟು ಮೊತ್ತ ತಪ್ಪಾಗಿ ನಮೂದಾಗಿರುತ್ತದೆ ಎಂದರೆ ನಾನು ಮನೆಯಲ್ಲಿ ನೋಡಿರುವುದಿಲ್ಲ ಈಗ ನೋಡುತ್ತಿದ್ದೇನೆ. ನಿ.ಪಿ.**15** ನ್ನು ಕೊಟ್ಟಿಯಾಗಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**03.** ಒಂದು ವರ್ಷಕ್ಕೆ ನನ್ನ ಮಗಳ ಬಸ್ಸಿನ ಶುಲ್ಕವು **5000/-** ರೂಪಾಯಿ ಇರುತ್ತದೆ. **2022** ನೇ ಇಸವಿಯ ಜೂನ್ ತಿಂಗಳಿನಿಂದ ಮಾರ್ಚ್ **2023** ರವರೆಗೆ **5000/-** ರೂಪಾಯಿಗಳನ್ನು ಬಸ್ಸಿನ ಶುಲ್ಕವಾಗಿ ಗ್ಲೋಬಲ್ ಶಾಲೆಯವರು ತೆಗೆದುಕೊಳ್ಳುತ್ತಾರೆ ಎಂದರೆ ಸರಿ. ನಿ.ಪಿ.**12** ಮತ್ತು **15** ಒಂದೇ ವರ್ಷದ ರಶೀದಿಗಳು ಇದ್ದು ಅವುಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು **1** ವರ್ಷದ ಶುಲ್ಕವನ್ನು ನಾನು **2** ಕಂತಿನಲ್ಲಿ ಭರಿಸಿದ್ದೇನೆ.

**2022** ನೇ ಇಸವಿಯಲ್ಲಿ ಶಾಲೆಯ ಬಸ್ಸಿನ ಶುಲ್ಕವನ್ನು **2500/-** ರಂತೆ **2** ಸಲ ಭರಿಸಿದ್ದೇನೆ. **2022** ನೇ ಇಸವಿಯಂದು **7** ನೇ ತಿಂಗಳು ಮತ್ತು **9** ನೇ ತಿಂಗಳಿನಲ್ಲಿ ತಲಾ **5500/-** ರಂತೆ ಕಟ್ಟಿರುತ್ತೇನೆ ಎಂದು ಸುಳ್ಳು ರಶೀದಿಗಳನ್ನು ನಿ.ಪಿ.**12** ಮತ್ತು **15** ರಲ್ಲಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಮಾತು ಸುಳ್ಳು ಎಂದರೆ ಸರಿಯಲ್ಲ. ಆದರಂತೆ ಉಳಿದ ಎಲ್ಲಾ ದಾಖಲಾತಿಗಳಲ್ಲಿ ತಂದೆ ತಾಯಿ ಹೆಸರು ಇರುವುದಿಲ್ಲ ಮತ್ತು ಶಾಲೆಯ ಸೀಲು ಇರುವುದಿಲ್ಲ ನಾನು ಸೃಷ್ಟಿ ಮಾಡಿ ದಾಖಲಾತಿಗಳನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಎಲ್ಲಾ ದಾಖಲಾತಿಗಳಲ್ಲಿ ದಿನಾಂಕ ಮತ್ತು ಇಸವಿ ನಮೂದು ಇರುವುದಿಲ್ಲ ಹೀಗಾಗಿ ಸೃಷ್ಟಿ ಮಾಡಿ ದಾಖಲಾತಿಗಳನ್ನು ಸಲ್ಲಿಸಿರುತ್ತೇನೆ ಎಂದರೆ ಬ್ಯಾಂಕಿನ ಸೀಲು ಇರುತ್ತದೆ, ನಾನು ದಾಖಲಾತಿಗಳನ್ನು ಸೃಷ್ಟಿ ಮಾಡಿರುವುದಿಲ್ಲ. ಸುಳ್ಳು ದಾಖಲಾತಿಗಳನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರ ಸರಿಯಲ್ಲ.

<u>ಮರುವಿಚಾರಣೆ ಇರುವುದಿಲ್ಲ.</u>

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ

"ನನ್ನ ಸಮಕ್ಷಮ"

**Sd/-**

( ಶ್ರೀಮತಿ ಅಕ್ಷತಾ ಟಿ )
ದಿವಾಣಿ ನ್ಯಾಯಾಧೀಶರು,
ಹಡಗಲಿ.